36-A

**<u>ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಶ್ರೀ ಸೂರಜ್ ರೇವಣ್ಣ, ಶ್ರೀ ನಿರಾಣಿ ಹಣಮಂತ್ ರುದ್ರಪ್ಪ, ಶ್ರೀ ಎಸ್. ಎಲ್. ಭೋಜೇಗೌಡ ಇವರು 330 ನೇ ನಿಯಮದ ಮೇರೆಗೆ ಸೂಚನೆಗೆ ಉತ್ತರ.</u>**

**<u>ವಿಷಯ:</u> ಬರದ ಬೇಗೆಯಿಂದ ಬಳಲುತ್ತಾ, ಕುಡಿಯುವ ನೀರಿಗೂ ಹಾಹಾಕಾರ ಪಡುತ್ತಿರುವ ಬಯಲುನಾಡಿನ ಜಿಲ್ಲೆಗಳಾದ ತುಮಕೂರು, ರಾಮನಗರ, ಬೆಂಗಳೂರು ಗ್ರಾಮಾಂತರ, ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಕುಡಿಯುವ ನೀರನ್ನು ಪೂರೈಸುವ ಆಶಯದಿಂದ ಕೈಗೊಂಡ ಎತ್ತಿನಹೊಳೆ ಯೋಜನೆಯು ಒಂದು ಮಹತ್ವಾಕಾಂಕ್ಷೆ ಯೋಜನೆಯಾಗಿದ್ದು, ಸಕಲೇಶಪುರ ತಾಲ್ಲೂಕಿನಿಂದ ಕೋಲಾರದ ಶ್ರೀನಿವಾಸಪುರದವರಿಗೆ ಅಂದಾಜು 260 ಕಿ. ಮೀ ಉದ್ದದ ತೆರೆದ ಕಾಲುವೆ ಹಾಗೂ ಪೈಪ್‌ಲೈನ್ ಮೂಲಕ ನೀರು ಹರಿಸಿ ಕಾಲುವೆಯ ಮಾರ್ಗದುದ್ದಕ್ಕೂ ಬರುವ ತಾಲ್ಲೂಕುಗಳ ಕೆರೆಗಳನ್ನು ತುಂಬಿಸುವುದು ಈ ಯೋಜನೆಯ ಮೂಲ ಉದ್ದೇಶವಾಗಿದ್ದರೂ ಕೂಡ ಇಂದಿನವರೆಗೆ ಒಂದು ಹಂತದಲ್ಲಿಯಾದರೂ ಸಾಕಾರಗೊಂಡಂತಹ ಯಾವುದೇ ಲಕ್ಷಣಗಳು ಕಂಡಿಲ್ಲ. ಈ ಯೋಜನೆಯನ್ನು 2 ಹಂತಗಳಲ್ಲಿ ಪೂರ್ಣಗೊಳಿಸಲು ಉದ್ದೇಶಿಸಿದ್ದರೂ ಕೂಡ 1 ಹಂತದಲ್ಲಿಯಾದರೂ ಪೂರ್ಣಗೊಂಡಿರುವುದಿಲ್ಲ. ತುಮಕೂರು ಜಿಲ್ಲೆಯ ಕೊರಟಗೆರೆ ತಾಲ್ಲೂಕಿನಲ್ಲಿ ನಿರ್ಮಾಣ ಮಾಡಲು ಉದ್ದೇಶಿಸಿರುವ ಬೈರಗೊಂಡ್ಲು ಜಲಾಶಯದ ಸುತ್ತಮುತ್ತಲಿನ ರೈತರ ಜಮೀನುಗಳ ಸ್ವಾಧೀನ ಪಡಿಸಿಕೊಳ್ಳುವ ಪ್ರಕ್ರಿಯೆಯಲ್ಲಿ ಹಲವಾರು ಗೊಂದಲ ಹಾಗೂ ತಾರತಮ್ಯಗಳು ಉಂಟಾಗಿ ಜಲಾಶಯದ ನಿರ್ಮಾಣದ ಕಾರ್ಯವು ಪ್ರಾರಂಭಿಕ ಹಂತದಲ್ಲಿಯೇ ವಿಫಲಗೊಂಡಿರುತ್ತದೆ. ಹಾಗೆಯೇ, ಭೈರಗೊಂಡ್ಲು ಜಲಾಶಯದಿಂದ ನೀರನ್ನು ಎತ್ತಿ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳ ಫೀಡರ್‌ಗಳಿಗೆ ನೀರನ್ನು ಒದಗಿಸುವ ಲಿಫ್ಟ್ ಕಾಮಗಾರಿಗಳ ಪ್ರಕ್ರಿಯೆಗಳು ಇನ್ನು ಟೆಂಡರ್ ಕರೆಯುವ ಹಂತದಲ್ಲಿಯೇ ಉಳಿದಿದ್ದು, ಇನ್ನು ಚಿಕ್ಕಬಳ್ಳಾಪುರ, ಕೋಲಾರ, ಶ್ರೀನಿವಾಸಪುರ (ಚಿಕ್ಕಬಳ್ಳಾಪುರ ಫೀಡರ್ ಕಾಲುವ ಸೇರಿದಂತೆ) ಫೀಡರ್ ಕಾಲುವೆಗಳ ನಿರ್ಮಾಣ ಕಾರ್ಯಗಳು ಇನ್ನು ಅಂದಾಜು ತಯಾರಿಕೆ ಪ್ರಕ್ರಿಯೆಗಳ ಹಂತದಲ್ಲಿರುವುದರಿಂದ ಬಯಲುನಾಡಿನ ಜಿಲ್ಲೆಗಳ ಜನರಿಗೆ ಕುಡಿಯುವ ನೀರನ್ನು ಪೂರೈಸಲು ಕೈಗೊಂಡಿರುವ ಈ ಯೋಜನೆಯು ಸಾಕಾರಗೊಳುವುದಂತೂ ಇಂತಹ ಸಾರ್ವಜನಿಕ ಮಹತ್ವದ ಈ ವಿಷಯವನ್ನು ಕುರಿತು 330 ನೇ ನಿಯಮದ ಮೇರೆಗೆ ಸೂಚನೆಗೆ ಉತ್ತರ.**

****

ಹಾಸನ ಜಿಲ್ಲೆ ಸಕಲೇಶಪುರ ತಾಲ್ಲೂಕಿನ, ಪಶ್ಚಿಮಘಟ್ಟದ ಮೇಲ್ಭಾಗದಲ್ಲಿ ಹರಿಯುವ ಎತ್ತಿನಹೊಳೆ, ಕಾಡುಮನೆಹೊಳೆ, ಕೇರಿಹೊಳೆ ಮತ್ತು ಹೊಂಗದಹಳ್ಳದಿಂದ ಮುಂಗಾರು ಮಳೆ ಅವಧಿಯಲ್ಲಿ 24.01 ಟಿ.ಎಂ.ಸಿ ಪ್ರಮಾಣದ ಪ್ರವಾಹದ ನೀರನ್ನು 07 ಜಿಲ್ಲೆಗಳಾದ ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ದಕ್ಷಿಣ, ತುಮಕೂರು, ಹಾಸನ ಹಾಗೂ ಚಿಕ್ಕಮಗಳೂರಿನ ಬರಪೀಡಿತ 29 ತಾಲ್ಲೂಕಿನ 38 ಪಟ್ಟಣ ಪ್ರದೇಶದ ಹಾಗೂ 6657 ಗ್ರಾಮಗಳ ಜನರಿಗೆ ಮತ್ತು ಜಾನುವಾರುಗಳಿಗೆ 14.056 ಟಿ.ಎಂ.ಸಿ ಕುಡಿಯುವ ನೀರನ್ನು ಒದಗಿಸುವುದರ ಜೊತೆಗೆ 05 ಜಿಲ್ಲೆಗಳಾದ ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ಹಾಸನ ಹಾಗೂ ತುಮಕೂರು ವ್ಯಾಪ್ತಿಯಲ್ಲಿ ಬರುವ 527 ಕೆರೆಗಳಿಗೆ 9.953 ಟಿ.ಎಂ.ಸಿ ಪ್ರಮಾಣದ ನೀರನ್ನು ಕೆರೆಗಳ ಸಾಮರ್ಥ್ಯದ ಶೇ. 50 ರಷ್ಟು ತುಂಬಿಸಿ ಅಂತರ್ಜಲ ಮರುಪೂರಣ ಮಾಡುವುದು ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ ಉದ್ದೇಶವಾಗಿರುತ್ತದೆ.

ಅನುಮೋದಿತ ಯೋಜನಾ ವರದಿಯಲ್ಲಿ ಮುಖ್ಯ ಗುರುತ್ವ ಕಾಲುವೆ ಹಾಗೂ ಫೀಡರ್ ಪೈಪ್‌ಲೈನ್‌ನ ವಿವಿಧ ಸರಪಳಿಗಳಲ್ಲಿ ಔಟ್‌ಲೆಟ್‌ಗಳನ್ನು ನಿರ್ಮಿಸಿ ಕುಡಿಯುವ ನೀರಿಗಾಗಿ ಮತ್ತು ಕೆರೆ ತುಂಬಿಸುವ ಸಲುವಾಗಿ ಹಂಚಿಕೆಯಾಗಿರುವ ನೀರನ್ನು Bulk Supply ಮಾಡಲು ಮಾತ್ರ ಉದ್ದೇಶಿಸಿದ್ದು, ಸದರಿ ನೀರನ್ನು ನಿಗದಿಪಡಿಸಲಾದ ಕೆರೆಗಳಿಗೆ ಹಾಗೂ ಫಲಾನುಭವಿಗಳಿಗೆ ಪೂರೈಸುವ/ ಸರಬರಾಜು ಮಾಡಲು ಅಗತ್ಯವಿರುವ ಕಾಮಗಾರಿಗಳನ್ನು ಸಂಬಂಧಪಟ್ಟ end users ಇಲಾಖೆಗಳ (KUWS&DB/RWSS/MI) ವತಿಯಿಂದ ಕೈಗೆತ್ತಿಕೊಳ್ಳಬೇಕಿರುತ್ತದೆ.

ಈ ಯೋಜನೆಯನ್ನು ಎರಡು ಹಂತಗಳಲ್ಲಿ ಕೈಗೆತ್ತಿಕೊಳ್ಳಲಾಗಿದ್ದು, ಪ್ರಸ್ತುತ, ಪ್ರಗತಿ ವಿವರಗಳು ಕೆಳಕಂಡಂತಿರುತ್ತವೆ.

**ಹಂತ-1 ರಲ್ಲಿ** ಕೈಗೆತ್ತಿಕೊಳ್ಳಲಾಗಿರುವ ಏತ ಕಾಮಗಾರಿಗಳು ಮತ್ತು ವಿದ್ಯುತ್ ಪೂರೈಕೆ ಕಾಮಗಾರಿಗಳನ್ನು ಪೂರ್ಣಗೊಳಿಸಿ ದಿನಾಂಕ:06.09.2024 ರಂದು ಪ್ರಾಯೋಗಿಕವಾಗಿ ಚಾಲನೆಗೊಳಿಸಿದ್ದು, ಗುರುತ್ವ ಕಾಲುವೆಯ ಸ:32.50 ಕಿ.ಮೀ ವರೆಗೆ ನೀರನ್ನು ಹರಿಸಿ ಅಲ್ಲಿನ ನಾಲಾ ಎಸ್ಕೇಪ್ ಮೂಲಕ ಸುಮಾರು 132.50 ಕಿ.ಮೀ ದೂರದಲ್ಲಿರುವ ವಾಣಿ ವಿಲಾಸ ಸಾಗರ ಜಲಾಶಯಕ್ಕೆ ವೇದಾ ವ್ಯಾಲಿಯ ಮುಖಾಂತರ ತಾತ್ಕಾಲಿಕವಾಗಿ 2024-25ನೇ ಹಾಗೂ 2025-26ನೇ ಸಾಲಿನಲ್ಲಿ ಒಟ್ಟಾರೆ ಇಲ್ಲಿಯವರೆಗೆ 3.283 ಟಿಎಂಸಿ ನೀರನ್ನು ಹರಿಸಲಾಗಿದೆ.

**ಹಂತ-2 ರಲ್ಲಿ**- 252.61 ಕಿ.ಮೀ ಉದ್ದದ ಗುರುತ್ವ ಮುಖ್ಯ ಕಾಲುವೆಯು ಹಾದು ಹೋಗುವ ತಾಲ್ಲೂಕುಗಳ ಪೈಕಿ ಬೇಲೂರು, ಅರಸೀಕೆರೆ ಮತ್ತು ತುಮಕೂರು ಜಿಲ್ಲೆಯ ಗುಬ್ಬಿ, ತಿಪಟೂರು ಮತ್ತು ತುಮಕೂರು ತಾಲ್ಲೂಕುಗಳಲ್ಲಿ 208.19 ಕಿ.ಮೀ ಉದ್ದದ ಕಾಲುವೆ ಕಾಮಗಾರಿಗಳು ಪೂರ್ಣ ಗೊಂಡಿದ್ದು, 28.25 ಕಿ.ಮೀ ಪ್ರಗತಿಯಲ್ಲಿದ್ದು, ಉಳಿದ 16.17 ಕಿಮೀ ಉದ್ದದ ಗುರುತ್ವ ಕಾಲುವೆಗಾಗಿ ಒಟ್ಟು 111.01 ಹೆಕ್ಟೇರ್ (274.31 ಎಕರೆ) ಪ್ರದೇಶಕ್ಕೆ ಏಕೀಕೃತ ಅರಣ್ಯ ತೀರುವಳಿ (Comprehensive Forest clearance) ಸಂಬಂಧ MoEF & CC, GoI, New Delhi ಗೆ ವತಿಯಿಂದ ತೀರುವಳಿ ನಿರೀಕ್ಷಿಯಣೆಯಲ್ಲಿದ್ದು, ತದನಂತರ ಅರಣ್ಯ ಪ್ರದೇಶದಲ್ಲಿನ ನಾಲಾ ಕಾಮಗಾರಿಯನ್ನು ಪೂರ್ಣಗೊಳಿಸಿ ಅಕ್ಟೋಬರ್-2026 ರ ಅಂತ್ಯಕ್ಕೆ ಗುರುತ್ವ ಕಾಲುವೆಯ ಸರಪಳಿ 245.0 ಕಿ.ಮೀ ವರೆಗೆ (ತುಮಕೂರು ವರೆಗೆ) ನೀರನ್ನು ಹರಿಸಲು ಯೋಜಿಸಲಾಗಿದೆ.

ಸಮತೋಲನಾ ಜಲಾಶಯಕ್ಕಿಂತ ಮೊದಲು ಕವಲೊಡೆಯುವ ಮಧುಗಿರಿ-ಪಾವಗಡ ಫೀಡರ್, ಟಿ.ಜಿ.ಹಳ್ಳಿ – ರಾಮನಗರ ಫೀಡರ್ ಹಾಗೂ ಗೌರಿಬಿದನೂರು ಫೀಡರ್ ಪೈಪ್‌ಲೈನ್ ಗಳಲ್ಲಿ ಕೆಲವು ಕಾಮಗಾರಿಗಳು ಪೂರ್ಣಗೊಂಡಿದ್ದು, ಉಳಿಕೆ ಕಾಮಗಾರಿಗಳು ವಿವಿಧ ಹಂತದಲ್ಲಿ ಪ್ರಗತಿಯಲ್ಲಿರುತ್ತವೆ.

ಪ್ರಸ್ತುತ, ಪರಿಷ್ಕೃತ ಯೋಜನಾ ವರದಿಯಂತೆ ಕಾಮಗಾರಿಯ ಬದಲಾದ ಸ್ವರೂಪಕ್ಕನುಗುಣವಾಗಿ ಲಕ್ಕೇನಹಳ್ಳಿ ಗ್ರಾಮದ ಸಮೀಪ 1.88 ಟಿ.ಎಂ.ಸಿ ಸಾಮರ್ಥ್ಯದ ಸಮತೋಲನಾ ಜಲಾಶಯದ ಕಾಮಗಾರಿಯನ್ನು ಗುತ್ತಿಗೆದಾರರಿಗೆ ವಹಿಸಲು ಕ್ರಮ ಜರುಗಿಸಲಾಗುತ್ತಿದ್ದು, ಕೊರಟಗೆರೆ ತಾಲ್ಲೂಕು ವಡೇರಹಳ್ಳಿ ಸಮೀಪ 1.20 ಟಿ.ಎಂ.ಸಿ ಸಂಗ್ರಹಣಾ ಸಾಮರ್ಥ್ಯದ ಮತ್ತೊಂದು ಸಮತೋಲನಾ ಜಲಾಶಯವನ್ನು ನಿರ್ಮಿಸಲು ನಿಗಮದ ಮಂಡಳಿಯು ಅನುಮೋದನೆ ನೀಡಿದ್ದು, ವಿವರವಾದ ವರದಿಯನ್ನು ತಯಾರಿಸುವ ಹಂತದಲ್ಲಿದೆ.

**ಸಮತೋಲನಾ ಜಲಾಶಯದ ನಂತರದಲ್ಲಿ** ಬರುವ ಕೋಲಾರ ಲಿಫ್ಟ್ ಪ್ಯಾಕೇಜ್-1 ಮತ್ತು ಗುರುತ್ವಾ ಪೈಪ್ ಲೈನ್ ಪ್ಯಾಕೇಜ್-2ರ ಕಾಮಗಾರಿಗಳು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿದ್ದು, ಕೋಲಾರ ಗುರುತ್ವಾ ಪೈಪ್ ಲೈನ್ ಪ್ಯಾಕೇಜ್-3 ಮತ್ತು 4 ಹಾಗೂ ಕೋಲಾರ & ಶ್ರೀನಿವಾಸಪುರ ಫೀಡರ್ ಪೈಪ್ ಲೈನ್ ನಿರ್ಮಾಣದ 05 ಪ್ಯಾಕೇಜ್ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಸರ್ಕಾರದ ಪತ್ರ ದಿನಾಂಕ:16.05.2025ರಲ್ಲಿ ಅನುಮತಿ ನೀಡಲಾಗಿರುತ್ತದೆ. ಪ್ರಸ್ತುತ, ಸದರಿ ಪ್ಯಾಕೇಜ್ ಕಾಮಗಾರಿಗಳ ಪಂಕ್ತೀಕರಣ (Pipeline alignment), ವಿನ್ಯಾಸ ಹಾಗೂ ನಕ್ಷೆಗಳಿಗೆ ಅನುಮೋದನೆ ನೀಡಲಾಗಿದೆ. Quality Assurance Plan (QAP) ಗಳಿಗೆ ಅನುಮೋದನೆ ನೀಡಲಾಗುತ್ತಿದ್ದು, ಭೂಸ್ವಾಧೀನ ಪ್ರಕ್ರಿಯೆ ಜಾರಿಯಲ್ಲಿರುತ್ತದೆ. ರೈತರೊಂದಿಗೆ ತ್ರಿಪಕ್ಷೀಯ ಒಪ್ಪಂದ ಮಾಡಿಕೊಂಡು ಶೀಘ್ರವಾಗಿ ಕಾಮಗಾರಿಗಳನ್ನು ಪ್ರಾರಂಭಿಸಲು ಕ್ರಮ ಜರುಗಿಸಲಾಗುತ್ತಿದೆ.

ಈ ಯೋಜನೆಯನ್ನು 2027-28ನೇ ಸಾಲಿನಲ್ಲಿ ಅಕ್ಟೋಬರ್-2027ರ ಅಂತ್ಯಕ್ಕೆ ಅನುದಾನದ ಲಭ್ಯತೆಯ ಮೇರೆಗೆ ಆದ್ಯತೆ ಮೇಲೆ ಸಂಪೂರ್ಣವಾಗಿ ಪೂರ್ಣಗೊಳಿಸಿ ಉದ್ದೇಶಿತ, ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ತುಮಕೂರು, ಬೆಂಗಳೂರು ದಕ್ಷಿಣ, ಹಾಗೂ ಹಾಸನ ಜಿಲ್ಲೆಗಳಿಗೆ ಕುಡಿಯುವ ನೀರನ್ನು ಪೂರೈಸಲು ಯೋಜಿಸಲಾಗಿರುತ್ತದೆ.

**ಸಂಖ್ಯೆ: ಜಸಂಇ 25 ಡಬ್ಲ್ಯೂಎಲ್ಎ 2026**

**(ಡಿ.ಕೆ.ಶಿವಕುಮಾರ್)**
**ಉಪ ಮುಖ್ಯಮಂತ್ರಿಗಳು**